# ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು

## I. ವಿಸ್ತರಣಾಧಿಕಾರಿಗಳು ಮತ್ತು ರೈತರ ತರಬೇತಿ ಕಾರ್ಯಕ್ರಮ

**ಕೃಷಿ ವಿಸ್ತರಣೆ ಮತ್ತು ತರಬೇತಿ ಲೆಕ್ಕಶೀರ್ಷಿಕೆ: 2401–00–109–0–21_ಉ.ಶೀ.: 059**

**ಯೋಜನೆಯ ಉದ್ದೇಶ**: ವಿಸ್ತರಣಾಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ರೈತ ಮಹಿಳೆಯರ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು.

★ ರಾಜ್ಯದ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ತರಬೇತಿ ಸಂಸ್ಥೆಗಳಲ್ಲಿ ಆಯೋಜಿಸಲ್ಪಡುವ ವಿವಿಧ ತರಬೇತಿ/ ಕಾರ್ಯಾಗಾರ / ವಿಚಾರ ಸಂಕಿರಣ ಇತ್ಯಾದಿಗಳಿಗೆ ವಿಸ್ತರಣಾಧಿಕಾರಿಗಳನ್ನು ನಿಯೋಜಿಸಲು ತಗಲುವ ತರಬೇತಿ ಶುಲ್ಕ ಮತ್ತು ಇತರೆ ವೆಚ್ಚವನ್ನು ಕೇಂದ್ರ ಕಛೇರಿಯಿಂದ ಭರಿಸಲಾಗುವುದು. ಹೊಸದಾಗಿ ನೇಮಕಗೊಂಡ ಮತ್ತು / ಅಥವಾ ಹಾಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಬುನಾದಿ ತರಬೇತಿ/ಪುನಶ್ಚೇತನ ತರಬೇತಿ, ಅಧ್ಯಯನ ಪ್ರವಾಸ ಇತ್ಯಾದಿಗಳಿಗೆ ಕೇಂದ್ರ ಕಛೇರಿಯಿಂದ ಸಂಬಂಧಪಟ್ಟ ತರಬೇತಿ ಕೇಂದ್ರಗಳಿಗೆ ಅನುದಾನ ಬಿಡುಗಡೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

★ ರೈತರ/ರೈತ ಮಹಿಳೆಯರ ಕೃಷಿಯಲ್ಲಿನ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗುವಂತೆ ವಿಶೇಷ ತರಬೇತಿಗಳನ್ನು ಆಯೋಜಿಸುವುದು, ಖುಷ್ಕಿ ಬೇಸಾಯ – ಭೂಚೇತನ ತಾಂತ್ರಿಕತೆಗಳು, ಕೃಷಿ ಸಂಬಂಧಿತ ಉಪ ಕಸುಬುಗಳ ಬಗ್ಗೆ ಕೌಶಲ್ಯಾಧಾರಿತ ತರಬೇತಿ, ಅಧ್ಯಯನ ಪ್ರವಾಸ ಇತ್ಯಾದಿಗಳಿಗೆ ತಗಲುವ ವೆಚ್ಚವನ್ನು ಭರಿಸುವುದು.

★ ಜಿಲ್ಲಾ ಕೃಷಿ ತರಬೇತಿ ಕೆಂದ್ರಗಳು ಜಿಲ್ಲಾವಲಯ 2435–00–101–0–31 (ಯೋಜನೆ) ದಡಿಯಲ್ಲಿನ ಸಾಂಸ್ಥಿಕ ತರಬೇತಿ ಕಾರ್ಯಕ್ರಮಗಳಿಗೆ ನಿಗದಿಪಡಿಸಲಾದ ಅನುದಾನದಲ್ಲಿ ವ್ಯತ್ಯಯ ಉಂಟಾಗುವ ಜಿಲ್ಲೆಗಳಿಗೆ ತರಬೇತಿ ವೆಚ್ಚವನ್ನು ಭರಿಸುವುದು.

1. **ವಿಶೇಷ ತರಬೇತಿಗಳು:**

ಸ್ಥಳೀಯ ಆಯ್ದ ರೈತರ/ರೈತ ಮಹಿಳೆಯರ ಬೇಡಿಕೆಗಳಿಗೆ ಅನುಗುಣವಾಗಿ ವೃತ್ತಿ ಸಾರ್ಮಥ್ಯವನ್ನು ಹೆಚ್ಚಿಸಲು ನೆರವಾಗುವಂತೆ ವಿಶೇಷ ತರಬೇತಿಗಳಾದ ಕೃಷಿ ಯಂತ್ರೋಪಕರಣಗಳ ನಿರ್ವಹಣೆ ಮತ್ತು ದುರಸ್ತಿ (ಟ್ರ್ಯಾಕ್ಟರ್, ಪವರ್ ಟಿಲ್ಲರ್, ಸ್ಪ್ರೇಯರ್ಸ್, ಡೀಸಲ್ ಪಂಪ್ ಸೆಟ್ಸ್, ಸಬ್ ಮರ್ಸಿಬಲ್ ಪಂಪ್ ಸೆಟ್ಸ್ ಇತ್ಯಾದಿ) ಕೃಷಿ ಸಂಬಂಧಿತ ಉಪ ಕಸುಬು / ಕೃಷಿ ಉದ್ಯಮಗಳು ಸೇರಿದಂತೆ ಜೇನು ಕೃಷಿ, ಕೋಳಿ, ಕುರಿ, ಹಂದಿ, ಮೊಲ ಮತ್ತು ಮೀನು/ಅಲಂಕಾರಿಕ ಮೀನು ಸಾಕಾಣಿಕೆ, ಹೈನುಗಾರಿಕೆ ಬಗ್ಗೆ ಕೌಶಲ್ಯಾಧಾರಿತ ತರಬೇತಿ, ಸಾವಯವ ಕೃಷಿ, ಸೂಕ್ಷ್ಮ ನೀರಾವರಿ, ಕೃಷಿ ಭಾಗ್ಯ, ಭೂಚೇತನ, ಭೂಸಮೃದ್ದಿ, ಕೃಷಿ ಯಂತ್ರಧಾರೆ– ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳು ಯೋಜನೆಗಳು ಮುಂಚೂಣಿ ಯೋಜನೆಗಳನ್ನೊಳಗೊಂಡಂತೆ,

ತೋಟಗಾರಿಕೆ–ನರ್ಸರಿ/ಸಸಿಮಡಿ ತಯಾರಿಕೆ ಕುರಿತು ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಆರು ದಿವಸಗಳ ಅವಧಿಗೆ ತಲಾ 30 ಅಭ್ಯರ್ಥಿಗಳಿಗೆ ಏರ್ಪಡಿಸಬೇಕು. ಸದರಿ ತರಬೇತಿಯನ್ನು ಕಡ್ಡಾಯವಾಗಿ ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳ ಜೊತೆ ಚರ್ಚಿಸಿ ಕೃಷಿಗೆ ಸಂಬಂಧಿಸಿದ ಪ್ರಚಲಿತ ವಿದ್ಯಾಮಾನಗಳ ಬಗ್ಗೆ ನೀಡುವುದು ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಏರ್ಪಡಿಸುವುದು. ಆರು ದಿನಗಳ ತರಬೇತಿ ಅವಧಿಯಲ್ಲಿ ಒಂದು ದಿನವನ್ನು ಕ್ಷೇತ್ರಭೇಟಿಗೆ ಮೀಸಲಿರಿಸುವುದು. ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ಕನಿಷ್ಠ 20 ಜನ ಅಭ್ಯರ್ಥಿಗಳು ಇದ್ದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದು.

- ಈ ತರಬೇತಿಗಳಿಗೆ ವಿಷಯಾಧಾರಿತ (Need based curriculum) ಹಾಗೂ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ವಿಷಯಗಳನ್ನು ಮುಂಚಿತವಾಗಿ ಪಟ್ಟಿ ಮಾಡಿ(Shortlist) ದಿನ ಪತ್ರಿಕೆಗಳಲ್ಲಿ, /ರೈತರ ವಾಟ್ಸ್‌ಪ್ ಗುಂಪು/ ಆಕಾಶವಾಣಿ, ಗ್ರಾಮ ಪಂಚಾಯಿತಿ ಕಛೇರಿಗಳ ಸೂಚನಾ ಫಲಕಗಳಲ್ಲಿ, ರೈತ ಸಂಪರ್ಕ ಕೇಂದ್ರಗಳ ಸೂಚನಾ ಫಲಕಗಳಲ್ಲಿ, ತಾಲ್ಲೂಕಿನ ಆತ್ಮ ಸಿಬ್ಬಂದಿ(ATM & BTM) ಮೂಲಕ ವ್ಯಾಪಕ ಪ್ರಚಾರ ನೀಡುವುದು.
- ರೈತರಿಂದ ಅರ್ಜಿಗಳನ್ನು ಅಹ್ವಾನಿಸಿ ತರಬೇತಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ತರಬೇತಿಗೆ ರೈತರನ್ನು ನೋಂದಾಯಿಸಬೇಕು (Registration) ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಮುಂಚಿತವಾಗಿ ಪ್ರಕಟಿಸಬೇಕು.
- ತರಬೇತಿಯ ವಿಷಯ ಸೂಚಿಯನ್ನು (Calender of Activities) ನೀಡುವುದು.
- ಇಲಾಖೆಯಲ್ಲಿನ ಇತರೆ ಯೋಜನೆಗಳ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಆಧ್ಯತೆಯ ಮೇರೆಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ನಡೆಸುವುದು.

**ಪ್ರತಿ ತರಬೇತಿಗೆ ತಗಲುವ ವೆಚ್ಚದ ವಿವರಗಳು ಇಂತಿವೆ (ರೂ.ಗಳಲ್ಲಿ)**

| ಕ್ರ. ಸಂ. | ಆರು ದಿನಗಳ ತರಬೇತಿ | ರೈತರ ತರಬೇತಿ | ಷರಾ |
|---|---|---|---|
| 1 | ಪ್ರಯಾಣ ವೆಚ್ಚ | 6500 | ತರಬೇತಿ ಕಾಲಕ್ಕೆ ಹಸ್ತ ಪ್ರತಿಗಳ ಶ್ರವಣ – ದೃಶ್ಯ ಸಾಧನಗಳು, ಮಾದರಿಗಳು ಇತ್ಯಾದಿಗಳನ್ನು ಬಳಸಬೇಕು. ಸಾದ್ಯವಾದಷ್ಟು ಕ್ಷೇತ್ರ ಭೇಟಿ ಮತ್ತು ಕೌಶಲ್ಯ ಕಲಿಕೆಗೆ ಅವಕಾಶ ನೀಡಬೇಕು |
| 2 | ಬೋರ್ಡಿಂಗ್ ವೆಚ್ಚ (200x30X6) | 36000 | |
| 3 | ಅತಿಥಿ ಉಪನ್ಯಾಸ(ಪ್ರತಿ ಉಪನ್ಯಾಸಕ್ಕೆ ರೂ.500/–) | 7500 | |
| 4 | ಕ್ಷೇತ್ರ ಭೇಟಿ | 6000 | |
| 5 | ತರಬೇತಿ ಸಾಮಗ್ರಿಗಳು | 1500 | |
| | ಒಟ್ಟು | 57500 | |

**2. ರೈತ/ರೈತ ಮಹಿಳೆಯರಿಗೆ ಅಧ್ಯಯನ ಪ್ರವಾಸಃ**

ರೈತ/ರೈತ ಮಹಿಳೆಯರಿಗಾಗಿ ರಾಜ್ಯ ಮಟ್ಟದ ಅಧ್ಯಯನ ಪ್ರವಾಸವನ್ನು ಅರ್ಥಪೂರ್ಣವಾಗಿ ಏರ್ಪಡಿಸಲು ಕ್ರಮ ವಹಿಸಬೇಕು. ಈ ಪ್ರವಾಸಕ್ಕೆ ಕಡ್ಡಾಯವಾಗಿ ತರಬೇತಿ ಹೊಂದಿರುವ, ಸಂವೇದನಾ ಶೀಲ ಮತ್ತು ಪ್ರಗತಿಪರ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಕೃಷಿ ಪ್ರಶಸ್ತಿ, ಕೃಷಿ ಪಂಡಿತ ಪ್ರಶಸ್ತಿ ವಿಜೇತರಿಗೆ ಹೆಚ್ಚಿನ ಆದ್ಯತೆ ನೀಡುವುದು. ನಾಲ್ಕು ದಿನಗಳ ಈ ಕಾರ್ಯಕ್ರಮದಲ್ಲಿ ಮೊದಲನೆ ದಿನ ತರಬೇತಿ ಕಾರ್ಯಕ್ರಮದಲ್ಲಿ ಅಭಿಶಿಕ್ಷಣ (Orientation) ತರಬೇತಿ ಏರ್ಪಡಿಸಿ ನಂತರ ಮೂರು ದಿನಗಳನ್ನು ಆದ್ಯಯನ ಪ್ರವಾಸಕ್ಕಾಗಿ ಹತ್ತಿರದ ಕೃಷಿ ಸಂಶೋಧನಾ ಕೇಂದ್ರಗಳು, ಉತ್ತಮ ಕೃಷಿ ಕ್ಷೇತ್ರಗಳು, ಕೃಷಿ ಪಂಡಿತ/ಕೃಷಿ ಪ್ರಶಸ್ತಿ/ಪ್ರಗತಿಪರ ಕೃಷಿಕರ ಕ್ಷೇತ್ರಗಳಿಗೆ ಮತ್ತು ಯಶಸ್ವಿ ಉದ್ದಿಮೆ/ಕ್ರಿಯಾತ್ಮಕ ಗುಂಪುಗಳು ಇತ್ಯಾದಿ ಸ್ಥಳಗಳಿಗೆ ಪ್ರವಾಸ ಏರ್ಪಡಿಸಬೇಕು. ಪ್ರತಿ ತಂಡದಲ್ಲಿ ಗರಿಷ್ಟ 40 ಅಭ್ಯರ್ಥಿಗಳಿಗೆ ರೂ.1,15,000/– ವರೆಗೆ ವೆಚ್ಚ ಭರಿಸುವುದು.

ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ನಡೆಸಿದ ತರಬೇತಿಗಳ ವಿವರಗಳನ್ನು ಪ್ರತಿ ತಿಂಗಳು ದಿನಾಂಕ 5 ರೊಳಗಾಗಿ ಕೇಂದ್ರ ಕಚೇರಿಗೆ ಕಳುಹಿಸಬೇಕು. ತರಭೇತಿ ವಿವರಗಳ ನಮೂನೆಯನ್ನು ಈ ಕೆಳಗೆ ನೀಡಿದೆ.

| ಕ್ರ.ಸಂ | ಯೋಜನೆ | ಲೆ.ಶೀ | ಅನುದಾನ ಬಿಡುಗಡೆ | ಆರ್ಥಿಕ ಗುರಿ | ಆರ್ಥಿಕ ಸಾಧನೆ | ತರಬೇತಿ ವಿಷಯ | ಹಾಜರಿದ್ದ ರೈತರ/ಅಧಿಕಾರಿಗಳ ಸಂ/ತಂಡ |
|---|---|---|---|---|---|---|---|
| | | | | | | | |

**ನಾಲ್ಕು ದಿನಗಳ ರೈತರ/ರೈತಮಹಿಳೆಯರ ಅಧ್ಯಯನ ಪ್ರವಾಸದ ವೆಚ್ಚದ ವಿವರ (ರೂ.ಗಳಲ್ಲಿ)**

| ಕ್ರ.ಸಂ | ವಿವರ | ಮೊತ್ತ |
|---|---|---|
| **1.** | ವಾಸ್ತವಿಕ ಪ್ರಯಾಣದ ವೆಚ್ಚ (ಹಳ್ಳಿಯಿಂದ ತರಬೇತಿ ಕೇಂದ್ರಕ್ಕೆ ಬಂದು ಹೋಗುವ) | **8,000.00** |
| **2.** | **ಅಭಿಶಿಕ್ಷಣ (Orientation) ತರಬೇತಿ ವೆಚ್ಚ (40X1X200)** | **8,000.00** |
| **3.** | **50 ಆಸನಗಳುಳ್ಳ ಕೆ.ಎಸ್.ಆರ್.ಟಿ.ಸಿ. ಬಸ್**<br>**(ದಿನಕ್ಕೆ ಕನಿಷ್ಟ 350 ಕಿ.ಮೀ.) ರೂ.33/ಕಿ.ಮೀ. (33x3x350)** | **34,650.00** |
| **4.** | **ಬೋರ್ಡಿಂಗ್ ವೆಚ್ಚ ಮತ್ತು ವಾಸ್ತವ್ಯ ವೆಚ್ಚ (450X3X40)** | **54,000.00** |
| **5.** | **ಇತರೆ ವೆಚ್ಚ** | **10,350.00** |
| | **ಒಟ್ಟು** | **1,15,000.00** |

ಕೆ.ಎಸ್.ಆರ್.ಟಿ.ಸಿ. ವಾಸ್ತವಿಕ ಚಾಲ್ತಿ ದರದನ್ವಯ ನಿಗದಿಪಡಿಸಿದ ವೆಚ್ಚವನ್ನು ಭರಿಸಲು ಬೋರ್ಡಿಂಗ್ ವೆಚ್ಚ ಹೊರತುಪಡಿಸಿ ಇತರೆ ಘಟಕಗಳ ಬದಲಾವಣೆಗೆ ಅನುಮತಿಸಿದೆ. ಆದರೆ, ಅಧ್ಯಯನ ಪ್ರವಾಸಕ್ಕೆ ನಿಗದಿಪಡಿಸಿದ ಒಟ್ಟಾರೆ ಮೊತ್ತ ಮೀರದಂತಿರಬೇಕು.

**ವಿಶೇಷ ಸೂಚನೆ**

- ಯೋಜನೆಗೆ ನಿಗದಿಪಡಿಸಿರುವ ಒಟ್ಟು ಅನುದಾನದಲ್ಲಿ ಪರಿಶಿಷ್ಠ ಜಾತಿಗೆ ಕನಿಷ್ಠ 17.15%, ಪರಿಶಿಷ್ಠ ಪಂಗಡಕ್ಕೆ 6.950%, ಮಹಿಳೆಯರ ಅಭಿವೃದ್ಧಿಗೆ ಕನಿಷ್ಠ 33.0% ಮತ್ತು ಅಲ್ಪಸಂಖ್ಯಾತರಿಗೆ ಕನಿಷ್ಟ 15.0% ರಷ್ಟು ವೆಚ್ಚ ಭರಿಸಬೇಕು.
- ಮಾಹೆವಾರು ಪ್ರಗತಿಯ ವರದಿಯನ್ನು ಸಲ್ಲಿಸುವಾಗ ಎಸ್.ಸಿ, ಎಸ್.ಟಿ, ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಭರಿಸಿದ ವೆಚ್ಚವನ್ನು ತಪ್ಪದೇ ನಮೂದಿಸಬೇಕು.
- ಅತಿಥಿ ಉಪನ್ಯಾಸಕರನ್ನು ಕರೆತರಲು ತರಬೇತಿ ಕೇಂದ್ರದಲ್ಲಿ ವಾಹನ ವ್ಯವಸ್ಥೆ ಇಲ್ಲದಿದ್ದಲ್ಲಿ, ಅತಿಥಿ ಉಪನ್ಯಾಸಕರಿಗೆ ವಾಸ್ತವಿಕ ಪ್ರಯಾಣ ವೆಚ್ಚವನ್ನು ನೀಡುವುದು.
- ಸಾಂಸ್ಥಿಕ ತರಬೇತಿ ಘಟಕದ ವೆಚ್ಚ ಭರಿಸುವಾಗ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು – ಜಿಲ್ಲಾವಲಯ ಅಡಿಯಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ತಪ್ಪದೆ ಪರಿಪಾಲಿಸತಕ್ಕದ್ದು.

**ಕಾರ್ಯಕ್ರಮದ ಜಿಲ್ಲಾವಾರು /ಘಟಕವಾರು ಭೌತಿಕ /ಆರ್ಥಿಕ ವಿಂಗಡನೆ**

(ಭೌತಿಕ– ಸಂಖ್ಯೆ , ಆರ್ಥಿಕ ಲಕ್ಷ ರೂ)

| ಕ್ರ. ಸಂ. | ಜಿಲ್ಲೆ | ವಿಶೇಷ ತರಬೇತಿ | | ಅಧ್ಯಯನ ಪ್ರವಾಸ | | ಸಾಂಸ್ಥಿಕ ತರಬೇತಿ | | | | ಒಟ್ಟು | |
|---|---|---|---|---|---|---|---|---|---|---|---|
| | | | | | | ರೈತರು | | ವಿ. ಕಾ. | | | |
| | | ಭೌ | ಆ | ಭೌ | ಆ | ಭೌ | ಆ | ಭೌ | ಆ | ಭೌ | ಆ |
| 1 | ಬಾಗಲಕೋಟೆ | 30 | 0.575 | 40 | 1.15 | 90 | 1.08 | 60 | 0.59 | 220 | 3.395 |
| 2 | ಬೆಂಗಳೂರು(ಗ್ರಾ) | 0 | 0 | 0 | 0 | 120 | 1.44 | 30 | 0.295 | 150 | 1.735 |
| 3 | ಬೆಂಗಳೂರು(ನ) | 30 | 0.575 | 40 | 1.15 | 60 | 0.72 | 60 | 0.59 | 190 | 3.035 |
| 4 | ಬೆಳಗಾಂ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 5 | ಬಳ್ಳಾರಿ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 6 | ಬೀದರ್ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 7 | ಬಿಜಾಪುರ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 8 | ಚಾಮರಾಜನಗರ | 0 | 0 | 0 | 0 | 0 | 0 | 0 | 0 | 0 | 0 |
| 9 | ಚಿಕ್ಕಬಳ್ಳಾಪುರ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |

| | | | | | | | | | | | |
|---|---|---|---|---|---|---|---|---|---|---|---|
| 10 | ಚಿಕ್ಕಮಗಳೂರು | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 11 | ಚಿತ್ರದುರ್ಗ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 12 | ದ. ಕನ್ನಡ | 30 | 0.575 | 40 | 1.15 | 60 | 0.72 | 60 | 0.59 | 190 | 3.035 |
| 13 | ದಾವಣಗೆರೆ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 14 | ಧಾರವಾಡ | 30 | 0.575 | 40 | 1.15 | 120 | 1.44 | 60 | 0.59 | 250 | 3.755 |
| 15 | ಗದಗ್ | 0 | 0 | 0 | 0 | 90 | 1.08 | 0 | 0 | 90 | 1.08 |
| 16 | ಗುಲ್ಬರ್ಗಾ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 17 | ಹಾಸನ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 18 | ಹಾವೇರಿ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 19 | ಕೊಡಗು | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 20 | ಕೋಲಾರ | 0 | 0 | 0 | 0 | 120 | 1.44 | 0 | 0 | 120 | 1.44 |
| 21 | ಕೊಪ್ಪಳ | 30 | 0.575 | 40 | 1.15 | 60 | 0.72 | 60 | 0.59 | 190 | 3.035 |
| 22 | ಮಂಡ್ಯ | 30 | 0.575 | 40 | 1.15 | 120 | 1.44 | 60 | 0.59 | 250 | 3.755 |
| 23 | ಮೈಸೂರು | 30 | 0.575 | 40 | 1.15 | 120 | 1.44 | 60 | 0.59 | 250 | 3.755 |
| 24 | ರಾಯಚೂರು | 30 | 0.575 | 40 | 1.15 | 240 | 2.90 | 30 | 0.295 | 340 | 4.92 |
| 25 | ರಾಮನಗರ | 0 | 0 | 0 | 0 | 90 | 1.08 | 0 | 0 | 90 | 1.08 |
| 26 | ಶಿವಮೊಗ್ಗ | 30 | 0.575 | 40 | 1.15 | 120 | 1.44 | 60 | 0.59 | 250 | 3.755 |
| 27 | ತುಮಕೂರು | 30 | 0.575 | 40 | 1.15 | 180 | 2.16 | 60 | 0.59 | 310 | 4.475 |
| 28 | ಉಡುಪಿ | 0 | 0 | 0 | 0 | 180 | 2.16 | 30 | 0.295 | 210 | 2.455 |
| 29 | ಉತ್ತರ ಕನ್ನಡ | 30 | 0.575 | 40 | 1.15 | 150 | 1.8 | 60 | 0.59 | 280 | 4.115 |
| 30 | ಯಾದಗಿರ್ | 0 | 0 | 0 | 0 | 150 | 1.8 | 0 | 0 | 150 | 1.8 |
| | ಕೇಂದ್ರ ಕಛೇರಿ | 0 | 0 | 0 | 0 | 0 | 0 | 0 | 0 | 0 | 0.0 |
| | ಒಟ್ಟು | **690** | **13.225** | **920** | **26.45** | **3870** | **46.46** | **1410** | **13.865** | **6890** | **100** |

## II. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ನಿರ್ವಹಣೆ ಉ. ಶೀ.: 200

ರಾಜ್ಯ ವಲಯದ ಕಾರ್ಯಕ್ರಮದಲ್ಲಿ 2018-19 ನೇ ಸಾಲಿಗೆ ರೂ.100.00 ಲಕ್ಷ ಅನುದಾನ ಒದಗಿಸಿದ್ದು, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ನಿರ್ವಹಣೆ ವೆಚ್ಚ (ಸಾಮಾಗ್ರಿಗಳ ಖರೀದಿ, ಸೌರಶಕ್ತಿ ಉಪಕರಣಗಳ ನಿರ್ವಹಣೆ, ಮಳೆ ನೀರು ಕೊಯ್ಲು ನಿರ್ವಹಣೆ, ಪರಿಣಾಮಕಾರಿ ತರಬೇತಿಗೆ ಬೇಕಾಗುವ ಪೂರಕ ಸಾಮಾಗ್ರಿಗಳ ಖರೀದಿ, ತರಬೇತಿ ಕೇಂದ್ರ ಹಾಗೂ ವಸತಿ ನಿಲಯಗಳ ನಿರ್ವಹಣೆ ಉದಾ: ಸಣ್ಣಪುಟ್ಟ ಕಿಟಕಿ ರಿಪೇರಿ, ಕೊಳಾಯಿ, ವಿದ್ಯುತ್, ಅಡುಗೆ ಕೋಣೆ ರಿಪೇರಿ ಕಾರ್ಯ, ಸ್ವಚ್ಛತೆ ಕಾರ್ಯ ಇತ್ಯಾದಿ) ಮತ್ತು ಕಛೇರಿ ವೆಚ್ಚಕ್ಕಾಗಿ ಒದಗಿಸಿಕೊಂಡಿರುವ ಅನುದಾನದ ವಿವರವನ್ನು ಈ ಕೆಳಗೆ ನೀಡಲಾಗಿದೆ.

**(ಆರ್ಥಿಕ ರೂ ಲಕ್ಷಗಳಲ್ಲಿ)**

| ಕ್ರ.ಸಂ | ಜಿಲ್ಲೆ | ಕಛೇರಿ ವೆಚ್ಚ ಹಾಗೂ ನಿರ್ವಹಣೆ ವೆಚ್ಚ |
|---|---|---|
| 1 | ಬಾಗಲಕೋಟೆ | 5.00 |
| 2 | ಬೆಂಗಳೂರು(ಗ್ರಾ) | 0 |
| 3 | ಬೆಂಗಳೂರು(ನ) | 4.00 |
| 4 | ಬೆಳಗಾಂ | 5.00 |
| 5 | ಬಳ್ಳಾರಿ | 5.00 |
| 6 | ಬೀದರ್ | 3.00 |
| 7 | ಬಿಜಾಪುರ | 5.00 |
| 8 | ಚಾಮರಾಜನಗರ | 0 |
| 9 | ಚಿಕ್ಕಬಳ್ಳಾಪುರ | 4.00 |
| 10 | ಚಿಕ್ಕಮಗಳೂರು | 3.00 |
| 11 | ಚಿತ್ರದುರ್ಗ | 5.00 |
| 12 | ದ. ಕನ್ನಡ | 4.00 |
| 13 | ದಾವಣಗೆರೆ | 4.00 |
| 14 | ಧಾರವಾಡ | 5.00 |
| 15 | ಗದಗ್ | 0 |
| 16 | ಗುಲ್ಬರ್ಗಾ | 5.00 |

| | | |
|---|---|---|
| 17 | ಹಾಸನ | 3.00 |
| 18 | ಹಾವೇರಿ | 3.00 |
| 19 | ಕೊಡಗು | 4.00 |
| 20 | ಕೋಲಾರ | 0 |
| 21 | ಕೊಪ್ಪಳ | 3.00 |
| 22 | ಮಂಡ್ಯ | 3.00 |
| 23 | ಮೈಸೂರು | 5.00 |
| 24 | ರಾಯಚೂರು | 4.00 |
| 25 | ರಾಮನಗರ | 0 |
| 26 | ಶಿವಮೊಗ್ಗ | 4.00 |
| 27 | ತುಮಕೂರು | 5.00 |
| 28 | ಉಡುಪಿ | 0 |
| 29 | ಉತ್ತರ ಕನ್ನಡ | 4.00 |
| 30 | ಯಾದಗಿರ್ | 0 |
| | ಕೇಂದ್ರ ಕಛೇರಿ | 5.00 |
| | **ಒಟ್ಟು** | **100.00** |

## III. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಉನ್ನತೀಕರಣ ಉ. ಶೀ.: 059

**2018–19ನೇ ಸಾಲಿಗೆ ಒದಗಿಸಿರುವ ಒಟ್ಟು ಅನುದಾನ ರೂ.100.00 ಲಕ್ಷಗಳು**

ಆದ್ಯತೆಯ ಮೇಲೆ ಕೈಗೊಳ್ಳಬೇಕಾಗುವ ಕಾಮಗಾರಿಗಳ ವಿವರ:

1. **ನೂತನ ಕಟ್ಟಡ ನಿರ್ಮಾಣ**
2. **ಹಾಸ್ಟೆಲ್ ಕಟ್ಟಡ ನಿರ್ಮಾಣ/ ನಿರ್ವಹಣೆ**
   - ★ ಮೂರು ಅಭ್ಯರ್ಥಿಗಳಿಗೆ ಒಂದು ಕೊಠಡಿಯಂತೆ ಪ್ರತಿ ಕೊಠಡಿಗೆ ಶೌಚಾಲಯವಿರುವ ಕನಿಷ್ಠ 10 ಕೊಠಡಿಗಳು.
   - ★ ಅಡಿಗೆ ಮನೆ ಮತ್ತು ಉಗ್ರಾಣ ಕೊಠಡಿ
   - ★ ಊಟದ ಕೊಠಡಿ

- ★ ಶೌಚಾಲಯ
- ★ ಆಟದ ಮೈದಾನ ಇತ್ಯಾದಿ.

**3. ನೀರಿನ ಸೌಲಭ್ಯ ಒದಗಿಸುವ ಕಾಮಗಾರಿಗಳು**

- ★ ಕೊಳವೆ ಬಾವಿ
- ★ ನೀರಿನ ಸರಬರಾಜು ಮಾಡಲು ಬೇಕಾಗುವ ಸಾಮಗ್ರಿಗಳು
- ★ ಟ್ಯಾಂಕ್ ನಿರ್ಮಾಣ ಇತ್ಯಾದಿ.

**4. ಸೌರಶಕ್ತಿ ಬಳಕೆಯ ಕಾಮಗಾರಿಗಳು/ನಿರ್ವಹಣೆ**

- ★ ಬೀದಿ ದೀಪ
- ★ ವಾಟರ್ ಹೀಟರ್ಸ್/ಗುಜರಾತ್ ಬಾಯಲರ್/ಸೋಲಾರ್ ಕುಕ್ಕರ್ (ಓವನ್)
- ★ ಸೌರ ಶಕ್ತಿ ದೀಪಗಳು/ ಲ್ಯಾಂಟರ್ನ್ಸ್/U.P.S/ನೀರೆತ್ತುವ ಪಂಪ್, ಇತ್ಯಾದಿ.

**5. ತರಬೇತಿ ಕೇಂದ್ರ ನಿರ್ಮಾಣ ಘಟಕದಡಿಯಲ್ಲಿ**

- ★ ಸಹಾಯಕ ಕೃಷಿ ನಿರ್ದೇಶಕರ ಕಛೇರಿ
- ★ ಬೋಧಕರ ಕೊಠಡಿ
- ★ ಗ್ರಂಥಾಲಯ
- ★ ವಸ್ತು ಸಂಗ್ರಹಾಲಯ
- ★ ಸಿಬ್ಬಂದಿ ಕೊಠಡಿ
- ★ ಸಭಾಂಗಣ/ಸೆಮಿನಾರ್ ಹಾಲ್
- ★ ಮನೋರಂಜನಾ ಕೊಠಡಿ ಮತ್ತು ಆಟದ ಸಾಮಗ್ರಿಗಳು
- ★ ಕಾರಿಡಾರ್ ಇತ್ಯಾದಿ

**6. ಪರಿಣಾಮಕಾರಿ ತರಬೇತಿಗೆ ಪೂರಕವಾದ ಬೋಧನಾ ಸಾಮಗ್ರಿಗಳು ನಿಯಮಾನುಸಾರ ಖರೀದಿಸುವುದು.**

- ★ ಶ್ರವಣ ದೃಶ್ಯ ಸಾಮಗ್ರಿಗಳು
- ★ ಗಣಕಯಂತ್ರ, ಜೆರಾಕ್ಸ್ ಯಂತ್ರ, ಫ್ಯಾಕ್ಸ್ ಯಂತ್ರ, ಲ್ಯಾಪ್ ಟಾಪ್,ಡಿಜಿಟೆಲ್‌ಕ್ಯಾಮರಾ, ಇತ್ಯಾದಿ
- ★ ದೂರವಾಣಿ ಇತ್ಯಾದಿ

**7. ವಾಹನ ಸೌಲಭ್ಯ**

- ★ ಅಭ್ಯರ್ಥಿಗಳಿಗೆ ವಾಹನ ಸೌಲಭ್ಯ ಒದಗಿಸುವುದು(ಕ್ಷೇತ್ರ ಭೇಟಿ)
- ★ ರೈತರಿಗೆ ಮತ್ತು ರೈತ ಮಹಿಳೆಯರಿಗೆ ತರಬೇತಿ ಕೇಂದ್ರಕ್ಕೆ ಬಂದು ಹೋಗಲು ಮತ್ತು ಕ್ಷೇತ್ರಭೇಟಿಗೆ ಅನುಕೂಲವಾಗುವಂತೆ ವಾಹನ ಸೌಲಭ್ಯ ಒದಗಿಸುವುದು (30 ಆಸನವುಳ್ಳ ವಾಹನ).

**8. ತರಬೇತಿ ಕೇಂದ್ರದ ಬೋಧನಾ ಕೊಠಡಿ, ಗ್ರಂಥಾಲಯ ಮತ್ತು ಸಂಗ್ರಹಾಲಯಕ್ಕೆ ಪೂರಕವಾದ ಪೀಠೋಪಕರಣಗಳನ್ನು ಒದಗಿಸುವುದು.**

**9. ವಸತಿ ಗೃಹಗಳ ನಿರ್ಮಾಣ /ನಿರ್ವಹಣೆ**

**10.** **ಮಳೆ ನೀರು ಕೊಯ್ಲು ಕಾಮಗಾರಿ**
**11.** **ತರಬೇತಿ ಕೇಂದ್ರದ ಆವರಣದಲ್ಲಿ ಕೈಗೊಳ್ಳಬೇಕಾಗಿರುವ ಅಹ್ಲಾದಕರ ವಾತಾವರಣ ಉಂಟು ಮಾಡುವ ಅಲಂಕಾರಿಕ ಕಾಮಗಾರಿಗಳು.**
**12.** **ತರಬೇತಿ ಕೇಂದ್ರದ ರಸ್ತೆ ಕಾಮಗಾರಿ.**
**13.** **ತರಬೇತಿ ಕೇಂದ್ರದಲ್ಲಿ ಅಗತ್ಯವಿರುವ ಇತರೆ ಪೂರಕ ಸಾಮಗ್ರಿಗಳ ಖರೀದಿ**

**ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳ ವಿವರಗಳು**

ಜಿ.ಕೃ.ತ.ಕೇಂ– ಹೆಸರು ಅಂಚೆ ವಿಳಾಸ

ನಮೂನೆ

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಷರಾ/ಸ್ಪಷ್ಟೀಕರಣ |
|---|---|---|---|
| | | | |
| | | | |
| | | | |
| | ಮಹಾ ಮೊತ್ತ | | |

**ತರಬೇತಿ ಕೇಂದ್ರದ ಮುಖ್ಯಸ್ಥರ ಸಹಿ**

ಸೂಚನೆಃ

ಆದ್ಯತೆ ಮೇಲೆ ಕಾಮಗಾರಿಯ ಆಯ್ಕೆಯ ಕುರಿತು ಸ್ಪಷ್ಟೀಕರಣವನ್ನು ಷರಾ ಕಾಲಂನಲ್ಲಿ ನಮೂದಿಸುವುದು. ಕಾಮಗಾರಿಗಳನ್ನು ಕೆಳಕಂಡಂತೆ ವರ್ಗೀಕರಣ ಮಾಡತಕ್ಕದ್ದು.

1. ತರಬೇತಿ ಕೇಂದ್ರದ ಕಾಮಗಾರಿಗಳು
2. ಹಾಸ್ಟಲ್ ಕಾಮಗಾರಿಗಳು
3. ಸೌರಶಕ್ತಿ ಬಳಕೆಯ ಕಾಮಗಾರಿಗಳು
4. ಕುಡಿಯುವ ನೀರಿನ ಸೌಲಭ್ಯಗಳ ಕಾಮಗಾರಿಗಳು
5. ಶ್ರವಣ ದೃಶ್ಯ ಸಾಧನಗಳು
6. ವಾಹನ ಸೌಲಭ್ಯಗಳು
7. ಕಾಮಗಾರಿಯ ವರ್ಗೀಕರಣ ಅನ್ವಯ ಅಂದಾಜು ಮೊತ್ತದ ಮಾಹಿತಿ ಹಾಗೂ ಮಹಾ ಮೊತ್ತವನ್ನು ನಮೂದಿಸಬೇಕು.

## IV. ಪ್ರಗತಿಪರ ರೈತರ ತಾಂತ್ರಿಕ ಆವಿಷ್ಕಾರಗಳನ್ನು ತರಬೇತಿಗಳ ಮೂಲಕ ಇತರೆ ರೈತರಿಗೆ ತಲುಪಿಸುವುದು (ಉ. ಶೀ.: 059)

ಕೃಷಿ ಇಲಾಖೆ ಹಾಗೂ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಮಗ್ರ ಕೃಷಿ ಕುರಿತು ರೈತರಿಗೆ ತರಬೇತಿ ನೀಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿನ ಪ್ರಗತಿಪರ ರೈತರು ಕೃಷಿ ಹಾಗು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ, ತಾವೇ ಅನ್ವೇಷಿಸಿರುವ ನೂತನ ಆವಿಷ್ಕಾರಗಳು ಹಾಗೂ ಅನುಸರಿಸುತ್ತಿರುವ ಆಧುನಿಕ ತಾಂತ್ರಿಕತೆಗಳನ್ನು, ತಮ್ಮ ಕ್ಷೇತ್ರದಲ್ಲೆ ಅಳವಡಿಸಿಕೊಂಡು ಫಲಿತಾಂಶ ಕಂಡುಕೊಂಡು, ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸಿಕೊಂಡು ಅವರ ಆರ್ಥಿಕ ಮಟ್ಟ ಸುಧಾರಣೆ ಮಾಡಿಕೊಂಡಿರುತ್ತಾರೆ.ಈ ಅಂಶಗಳ ಕುರಿತು ಪ್ರಗತಿಪರ ರೈತರ ಅನುಭವಗಳ ಮೂಲಕ ನೋಡಿ ಕಲಿ ಮಾಡಿ ತಿಳಿ ಎಂಬುದರ ನಿಟ್ಟಿನಲ್ಲಿ ಇತರೆ ರೈತರಿಗೆ ತರಬೇತಿ ಮುಖಾಂತರ ಅಳವಡಿಸಿಕೊಳ್ಳಲು ಉತ್ತೇಜನ ನೀಡುವುದು. ಕೃಷಿ ಇಲಾಖೆಯಿಂದ ರೈತರಿಗೆ ನೀಡಲಾಗುತ್ತಿರುವ ಕೃಷಿ ಪಂಡಿತ ಪ್ರಶಸ್ತಿ, ಕೃಷಿ ಪ್ರಶಸ್ತಿ ವಿಜೇತರ ಹಾಗೂ ಕೃಷಿ ವಿಶ್ವವಿದ್ಯಾಲಯ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ಆಯ್ಕೆಯಾಗಿರುವ ಕೃಷಿ ಪ್ರಶಸ್ತಿ ವಿಜೇತರು ಹಾಗೂ ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳಿಂದ ಗುರುತಿಸಿರುವ ಪ್ರಗತಿಪರ ರೈತರ ಪಟ್ಟಿ ತಯಾರಿಸಿ, ಸದರಿ ರೈತರು ಆವಿಷ್ಕರಿಸಿರುವ ನೂತನ ತಾಂತ್ರಿಕತೆಗಳನ್ನು ಜಿಲ್ಲಾವಾರು ಪಟ್ಟಿ ಮಾಡಿ, ಜಿಲ್ಲೆಗಳಲ್ಲಿ ಸ್ಥಳೀಯ ಅವಶ್ಯಕತೆಗನುಗುಣವಾಗಿ ಪ್ರಗತಿಪರ ರೈತರಿಂದ ಇತರೆ ರೈತರಿಗೆ ತರಬೇತಿಗಳನ್ನು ನೀಡಲು ಉದ್ದೇಶಿಸಲಾಗಿದೆ.

**ಈ ಯೋಜನೆಯ ಪ್ರಮುಖ ಉದ್ದೇಶಗಳು:**

1. ಪ್ರಗತಿ ಪರ ರೈತರ ಮೂಲಕ ಇತರೆ ರೈತರನ್ನು ಮುಖ್ಯವಾಹಿನಿಗೆ ತರುವುದು.
2. ರೈತರನ್ನು ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಲು ಪ್ರೇರೇಪಿಸುವುದು.
3. ರೈತರು ಸಮಗ್ರ ಕೃಷಿ ಪದ್ಧತಿಗಳನ್ನು ಅನುಸರಿಸುವಂತೆ ಮಾಡಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಸುವತ್ತ ಗಮನ ಹರಿಸುವುದು.
4. ಕೃಷಿಯಲ್ಲಿ ರೈತರೇ ಅನ್ವೇಷಿಸಿರುವ ನೂತನ ಆವಿಷ್ಕಾರಗಳನ್ನು ಹಾಗೂ ತಾಂತ್ರಿಕತೆಗಳನ್ನು ಪ್ರಚಾರ ಮಾಡುವುದು ಹಾಗೂ ಇತರೆ ರೈತರು ಈ ನಿಟ್ಟಿನಲ್ಲಿ ಕಾರ್ಯಗತರಾಗಲು ಪ್ರೋತ್ಸಾಹಿಸುವುದು.

**ವಿನ್ಯಾಸ:**

ರೈತರು ಕೃಷಿ ಹಾಗು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತಾವೇ ಅನ್ವೇಷಿಸಿ, ತಮ್ಮ ಕ್ಷೇತ್ರದಲ್ಲೇ ಅಳವಡಿಸಿಕೊಂಡು ಉತ್ತಮ ಫಲಿತಾಂಶ ಕಂಡುಕೊಂಡಿರುವ ತಾಂತ್ರಿಕತೆಗಳನ್ನು ಇತರೆ ರೈತರಿಗೆ ತರಬೇತಿ ಮುಖಾಂತರ ಪ್ರಚಾರ ಮಾಡಿ ಎಲ್ಲಾ ರೈತರಿಗೆ ಅಳವಡಿಸಿಕೊಳ್ಳಲು ಉತ್ತೇಜನ ನೀಡುವುದು, ಈ ಯೋಜನೆಯ ಉದ್ದೇಶವಾಗಿದೆ. ಈಗಾಗಲೇ ಕೃಷಿ ಇಲಾಖೆಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ರೈತರಿಗೆ ಕೃಷಿ ಪಂಡಿತ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯದಿಂದ ಸಹ ಕೃಷಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಇಂತಹ ರೈತರು ಹಾಗೂ ಪ್ರಗತಿಪರ ರೈತರು ಆವಿಷ್ಕರಿಸಿರುವ ಹೊಸ ತಾಂತ್ರಿಕತೆಗಳನ್ನು ಇತರೆ ರೈತರು ಅಳವಡಿಸಿಕೊಳ್ಳಲು ತರಬೇತಿ ಮುಖಾಂತರ ಪ್ರಚಾರ ಮಾಡಿ, ಉತ್ತೇಜನ ನೀಡಿ ಹೆಚ್ಚಿನ ಇಳುವರಿ ಪಡೆಯುವ ನಿಟ್ಟಿನಲ್ಲಿ ಪ್ರಗತಿ ಸಾಧಿಸಬಹುದಾಗಿದೆ.

ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು, ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ತಮ್ಮ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಮೂರು ದಿನಗಳ ತರಬೇತಿಯನ್ನು 30 ಜನ ರೈತರಿಗೆ ಹಮ್ಮಿಕೊಳ್ಳುವುದು.

ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಗತಿಪರ ರೈತರು ಅಳವಡಿಸಿಕೊಂಡಿರುವ ನೂತನ ಆವಿಷ್ಕಾರ ಹಾಗೂ ತಾಂತ್ರಿಕತೆಗಳನ್ನು ಅಂತಿಮಗೊಳಿಸಿ ತರಬೇತಿ ಪಠ್ಯಕ್ರಮ ತಯಾರಿಸುವುದು. ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮವನ್ನು ಯೋಜಿಸುವುದು. ಈ ತರಬೇತಿ ಕಾರ್ಯಕ್ರಮಕ್ಕೆ ಜಿಲ್ಲೆಗಳಿಂದ ರೈತರನ್ನು ಆಯ್ಕೆ ಮಾಡಿ ನಿಯೋಜಿಸಲು ಕಾರ್ಯಕ್ರಮ ರೂಪಿಸುವುದು. ಪ್ರಗತಿಪರ ರೈತರ ಆವಿಷ್ಕಾರಗಳನ್ನು ಕೃಷಿ ವಿಶ್ವವಿದ್ಯಾಲಯ ತಜ್ಞರ ಸಹಯೋಗದೊಂದಿಗೆ ಆಯ್ಕೆಯಾದ ರೈತರಿಗೆ ತರಬೇತಿ ನೀಡುವುದು.

ಪ್ರಸ್ತಾಪಿಸಿರುವ ಪ್ರತಿಯೊಂದು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಮೂರು ದಿವಸಗಳಿಗೆ ಈ ಕೆಳಕಂಡಂತೆ ವಿನ್ಯಾಸಗೊಳಿಸಲಾಗಿದೆ.

- ಮೊದಲನೇ ದಿನ: ನೊಂದಣಿ, ಪೂರ್ವ–ಪರೀಕ್ಷೆ, ಪ್ರಗತಿಪರ ರೈತರಿಂದ ಅನುಭವ ಹಂಚಿಕೊಳ್ಳುವುದು ಮತ್ತು ಸಂವಾದ (ಅತಿಥೇಯ ಸಂಸ್ಥೆಯಲ್ಲಿ).
- ಎರಡನೇ ದಿನ: ಪ್ರಗತಿಪರ ರೈತರ ತಾಕುಗಳಿಗೆ ಭೇಟಿ, ಸಂವಾದ, ಒಂದುಗೂಡಿ ಕಲಿಕೆ, ಮತ್ತು ಕೌಶಲ್ಯ ಕುರಿತು ಪ್ರಾತ್ಯಕ್ಷಿಕೆ (ನೋಡುವುದರಿಂದ ನಂಬಿಕೆ).
- ಮೂರನೇ ದಿನ: ಪ್ರಗತಿಪರ ರೈತರ ತಾಕುಗಳಿಗೆ ಭೇಟಿ, ಸಂವಾದ, ಕೌಶಲ್ಯ ಕುರಿತು ಪ್ರಾತ್ಯಕ್ಷಿಕೆ, ಪೂರ್ವೋತ್ತರ ಪರೀಕ್ಷೆ, ಒಂದುಗೂಡಿ ಕಲಿಕೆ ಮತ್ತು ಶಿಬಿರಾರ್ಥಿಗಳಿಂದ ಕ್ರಿಯಾಯೋಜನೆ (ನೋಡುವುದರಿಂದ ನಂಬಿಕೆ).

ಕೃಷಿ ವಿಶ್ವವಿದ್ಯಾಲಯ ಹಾಗೂ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ಪ್ರತಿ ಕಂದಾಯ ವಿಭಾಗಕ್ಕೆ ಎರಡು ತರಬೇತಿಗಳಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

- ಅವಶ್ಯಕತೆಗೆ ಅನುಗುಣವಾಗಿ ಮೊದಲನೇ ದಿನ ಸಾಂಸ್ಥಿಕ ತರಬೇತಿಯನ್ನು ಹಮ್ಮಿಕೊಳ್ಳುವುದು, ಎರಡನೇ ಮತ್ತು ಮೂರನೇ ದಿನ ಪ್ರಾತ್ಯಕ್ಷಿಕೆಯನ್ನು/ ಕ್ಷೇತ್ರಭೇಟಿ ಕೈಗೊಳ್ಳುವುದು.

**ತರಬೇತಿಗೆ ರೈತರ ಆಯ್ಕೆ :**

- ಕೃಷಿ ವಿಶ್ವವಿದ್ಯಾಲಯಗಳು ಜಿಲ್ಲೆಗಳ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಪ್ರಗತಿಪರ ರೈತರ ಪಟ್ಟಿ ತಯಾರಿಸಿ (ತರಬೇತಿಯ ವಿಷಯ ತಜ್ಞರು), ಅವರು ಆವಿಷ್ಕರಿಸಿರುವ ನೂತನ ತಾಂತ್ರಿಕತೆಗಳ ತರಬೇತಿಯ ಬಗ್ಗೆ ವೇಳಾಪಟ್ಟಿ ತಯಾರಿಸಿ ತಾಲ್ಲೂಕು, ಗ್ರಾಮ ಪಂಚಾಯತಿ ಮತ್ತು ರೈತ ಸಂಪರ್ಕ ಕೇಂದ್ರಗಳಲ್ಲಿ ರೈತರ ತರಬೇತಿ ಕುರಿತು ಸ್ಥಳೀಯ ದಿನಪತ್ರಿಕೆ/ವಾಟ್ಸ್ ಆಪ್/ ಆಕಾಶವಾಣಿ ಇತ್ಯಾದಿಗಳ ಮೂಲಕ ವ್ಯಾಪಕ ಪ್ರಚಾರ ಮಾಡುವುದು.
- ಜಿಲ್ಲೆಗಳಿಂದ ತರಬೇತಿಗೆ ರೈತರನ್ನು ಆಯ್ಕೆ ಮಾಡಿ ನಿಯೋಜಿಸುವುದು ರೈತರನ್ನು ಆಯ್ಕೆ ಮಾಡಲು ಸ್ಥಳೀಯ ಮಟ್ಟದಲ್ಲಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ನೀಡಿ ಗ್ರಾಮ ಪಂಚಾಯಿತಿಗಳು, ರೈತ ಸಂಪರ್ಕ

ಕೇಂದ್ರಗಳು, ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ವ್ಯಾಪಕ ಪ್ರಚಾರ ಮಾಡುವ ಕುರಿತು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಕ್ರಮವಹಿಸುವುದು.

- ತರಬೇತಿಗೆ ಆಸಕ್ತಿವುಳ್ಳ ರೈತರು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳು/ರೈತ ಸಂಪರ್ಕ ಕೇಂದ್ರಗಳಲ್ಲಿ/ ಗ್ರಾಮ ಪಂಚಾಯತಿಗಳಲ್ಲಿ/ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಅರ್ಜಿಗಳನ್ನು ಸಲ್ಲಿಸುವುದು.
- ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ರೈತರನ್ನು ತರಬೇತಿಗೆ ಆಯ್ಕೆ ಮಾಡುವುದು.

<u>ಪ್ರತಿ ತರಬೇತಿಗೆ ತಗಲುವ ವೆಚ್ಚದ ವಿವರಗಳು ಇಂತಿವೆ:</u>

| ಕ್ರ. ಸಂ. | ವಿವರಗಳು | ಮೊತ್ತ (ರೂಗಳಲ್ಲಿ) |
|---|---|---|
| **1.** | ಊಟ ರೂ.300–00 ಒಬ್ಬರಿಗೆ ಒಂದು ದಿನಕ್ಕೆ<br>(ರೂ. 300 X 30 ಜನ ರೈತರು X 3 ದಿವಸ) | **27000.00** |
| **2.** | ವಸತಿ ರೂ.100 ಒಬ್ಬರಿಗೆ ಒಂದು ದಿನಕ್ಕೆ<br>(ರೂ.100 X 30 ಜನ ರೈತರು X 3 ದಿವಸ) | **9000.00** |
| **3.** | ತರಬೇತಿ ಕಿಟ್ (ಬ್ಯಾಗ್, ಪೆನ್, ಪ್ಯಾಡ್, ಫೋಲ್ಡರ್ಸ್, ತರಬೇತಿ ಕೈಪಿಡಿ ಇತ್ಯಾದಿ (750 X 30 ಜನ) | **22000.00** |
| **4.** | ಕ್ಷೇತ್ರಭೇಟಿ ( ವಾಹನ ಬಾಡಿಗೆ/ ಇಂಧನವೆಚ್ಚ ) | **18000.00** |
| **5.** | ಸಂಪನ್ಮೂಲ ವ್ಯಕ್ತಿಗಳಿಗೆ (ಪ್ರಗತಿಪರ ರೈತರಿಗೆ) ಗೌರವಧನ ರೂ.2000/ ತರಗತಿಗೆ | **16000.00** |
| **6.** | ಇತರೆ (**Institution charges, Documentation, Evaluation studies, etc.)** | **18000.00** |
| **7.** | ರೈತರಿಗೆ ಪ್ರಯಾಣ ವೆಚ್ಚ/ **Travel expenses for farmers** | **15000.00** |
| | ಒಟ್ಟು | **125000** |